## ಕಲ್ಲಿನ ದೀಪ?

ಹಂಪಿಯ ವಿರೂಪಾಕ್ಷ ದೇವಾಲಯದ ಪ್ರಾಕಾರದ ಸುತ್ತಮುತ್ತ ನೋಟ ಹರಿಸಿದಾಗ ಅಲ್ಲೊಂದು ದೊಡ್ಡದಾದ ಕಲ್ಲಿನ ತೊಟ್ಟಿಯಂತಹದ್ದು ಕಾಣಸಿಗುತ್ತದೆ. ಇದನ್ನು ಸುಮಾರು ನಾಲ್ಕು ನೂರು ವರ್ಷಗಳಷ್ಟು ಹಿಂದೆ ಯಾರೋ ದಾನ ಕೊಟ್ಟಿದ್ದರು ಎಂಬುದು ತಿಳಿದುಬರುತ್ತದೆ. ಆದರೆ ಇದನ್ನು ಯಾವುದಕ್ಕೆ ಬಳಸುತ್ತಿದ್ದರೆಂಬ ತಿಳಿವಳಿಕೆ ಯಾರಿಗೂ ಇಲ್ಲ. ಹಲವರು ನಗಾರಿ ಅಥವಾ ನೀರಿನ ತೊಟ್ಟಿ ಎಂದು ಹೇಳಿದರೆ, ಕೆಲವರು ದೀಪ ಎಂದು ಹೇಳುತ್ತಾರೆ. ಒಟ್ಟಾರೆ ಹಳೆಯ ವೈಭವದ ಸಂಕೇತವಾಗಿ ಈ ಕಲ್ಲಿನ ಸಾಧನ ನೋಡುಗರ ಗಮನ ಸೆಳೆಯುತ್ತದೆ.

**- ಭಾಗ್ಯಲಕ್ಷ್ಮಿ ಬೆಂಡೆಹಕ್ಕಲು, ಮಂಡ್ಯ**





## ಶತಮಾನದ ಹಿಂದಿನ ಚಿತ್ರ!

ಧಾರವಾಡದಲ್ಲಿ 1918 ರ ಮೇ 11,12 ಮತ್ತು 13 ರಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಅದರ ಅಧ್ಯಕ್ಷತೆಯನ್ನು ಶಾಸನಗಳ ಸಂಶೋಧನಾ ತಜ್ಞರು ಹಾಗೂ ಕರ್ನಾಟಕ ಕವಿ ಚರಿತೆ ರಚನಾಕಾರರಾದ ಆರ್. ನರಸಿಂಹಾಚಾರ್ ವಹಿಸಿದ್ದರು. ಆಗಲೂ ಆಂಗ್ಲ ಭಾಷಾ ಪ್ರಭಾವ ಮತ್ತು ಕನ್ನಡದ ಏಳಿಗೆಯ ಬಗ್ಗೆ ಸಲಹೆಯನ್ನು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನೀಡಿದ್ದರು. ಅಂದು ಸಮ್ಮೇಳನದಲ್ಲಿ ಭಾಗವಹಿಸಿದ ಸಾಹಿತಿಗಳು ಮತ್ತು ಗಣ್ಯರು ತೆಗೆಸಿಕೊಂಡ ಭಾವಚಿತ್ರವಿದು. ಹಾವೇರಿ ತಾಲ್ಲೂಕು ಹಂದಿಗನೂರಿನ ವಾಡೆಯಲ್ಲಿ ಕಂಡು ಬಂತು. ಶತಮಾನೋತ್ಸವದ ನೆನಪಿಗಾಗಿ ಈ ಚಿತ್ರ.

**-ಪ್ರಕಾಶ ಎಸ್. ಮನ್ನಂಗಿ,**
**ಮೋಟೆಬೆನ್ನೂರು**

## ಟ್ರೆಡಲ್ ಮುದ್ರಣ ಯಂತ್ರ

ಆಫ್‌ಸೆಟ್ ಮುದ್ರಣ ಬಂದ ಬಳಿಕ ಟ್ರೆಡಲ್ ಮುದ್ರಣ ಯಂತ್ರಗಳು ತಮ್ಮ ಅಸ್ತಿತ್ವ ಕಳೆದುಕೊಂಡಿವೆ. ಟ್ರೆಡಲ್ ಮಷಿನ್ ಮೇಲೆ ಮುದ್ರಣ ಮಾಡಬೇಕಾದರೆ ಒಂದೊಂದೇ ಲೋಹದ ಅಕ್ಷರಗಳ ಮೊಳೆಗಳನ್ನು ಜೋಡಿಸಬೇಕು. ಅವುಗಳನ್ನೆಲ್ಲ ಭದ್ರಪಡಿಸಿ ಮಷಿನ್‌ಗೆ ಅಳವಡಿಸಿ ನಿಧಾನವಾಗಿ ಮುದ್ರಣ ಮಾಡಬೇಕಾಗುತ್ತಿತ್ತು. ಅಕ್ಷರಗಳು ಸವೆದರೆ ಮತ್ತೆ ಅವುಗಳನ್ನು ನವೀಕರಿಸಬೇಕಾಗುತ್ತಿತ್ತು. ಆದರೆ ಟ್ರೆಡಲ್ ಮುದ್ರಣದಷ್ಟು ಆಫ್‌ಸೆಟ್‌ನಲ್ಲಿ ಮುದ್ರಿಸಿದ ವಿಷಯಕ್ಕೆ ಆಯುಷ್ಯ ಇಲ್ಲವಂತೆ.

ರಬಕವಿಯ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ಈಗಲೂ ಟ್ರೆಡಲ್ ಮಷಿನ್ ನೋಡಲು ಸಿಗುತ್ತದೆ. ಸುಮಾರು ನಲವತ್ತು ವರ್ಷಗಳ ಹಿಂದೆ ತಾವು ಪ್ರಾರಂಭಿಸಿದ 'ಧಡಲ್‌ಬಾಜಿ' ವಾರಪತ್ರಿಕೆಯನ್ನು ಮುದ್ರಿಸುವ ಸಲುವಾಗಿ ಸಂಪಾದಕ ನೀಲಕಂಠ ದಾತಾರ ಈ ಮಷಿನ್ ತಂದಿದ್ದರು.

**-ಯಶವಂತ ವಾಜಂತ್ರಿ, ರಬಕವಿ**

